UOC-270
T-P-2.

R No KRNN 12 8-4-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭವಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಪರಸ್ಥದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥ ಚಾರಸಿರತ ಎಂ. ಎಸ್. ಕೃಷ್ಣರಾವ್ 13 ಪ.ಸ

ಪ್ರಧಾನಿ ಇಂದಿರಾರವರ ಎಚ್ಚರಿಕೆ

ಪರೀಕ್ಷಾ ಮೇಲ್ವಿಚಾರಕರ ಗ್ರಹಚಾರ

ಷಿಲ್ಲಾಂಗ್— ಗೌಹತಿಯ ಪಾನ್ ಬಜಾರ್ ಹೈ ಸ್ಕೂಲಿನಲ್ಲಿ ತಾನು ತಂದಿದ್ದ ಕಾಗದಗಳಿಂದ ಒಬ್ಬ ಹುಡುಗಿ ಕಾಪಿ ಮಾಡುತ್ತಿದ್ದಾಗ, ಅದನ್ನು ತಪ್ಪಿಸಲು ಹೋಡ ಪರೀಕ್ಷಾ ಮೇಲ್ವಿಚಾರಕರನ್ನು ಕಡಿದು ಪರಿಚಿದಳು.

★

ಅಕ್ಕಿ ರೂ 1 ಕೆ 1 ಕಿಲೊ

ಹೈದರಾಬಾದು— ಬಳಕೆದಾರರಿಗೆ ಅಕ್ಕಿಯನ್ನು ಕಿಲೋಗೆ ರೂ. 1 ರಂತೆ ಒಗಗಿಸಲು ಸರಕಾರ ಪ್ರಯತ್ನಿಸುತ್ತಿರುವುದಾಗಿ ಮುಖ್ಯ ಮಂತ್ರಿ ಶ್ರೀ ವೆಂಗಲರಾವ್ ಹೇಳಿರುವರು.

★

ರಾಸುಗಳಿಗೆ ಬಹುಮಾನ ವಿತರಣೆ

ಮೈಸೂರು— ರಾಜ್ಯದ ಕಾನೂನು ಹಾಗೂ ಪೌರಾಡಳಿತ ಸಚಿವರಾದ ಶ್ರೀ ಡಿ. ನಾಯ್ಕರ್‌ರವರು ಶನಿವಾರ ಟಿ ನರಸಿಪುರದಲ್ಲಿ ನಡೆದ ಶ್ರೀ ಗುಂಜಾ ನರಸಿಂಹ ಸ್ವಾಮಿಯ ಜಾತ್ರೆಯಲ್ಲಿ ಭಾಗವಹಿಸಿದ್ದು ಉತ್ತಮ ರಾಸುಗಳಿಗೆ ಬಹುಮಾನ ನೀಡಿದರು; ಸಚಿವರು ಈ ಸಂದರ್ಭದಲ್ಲಿ ಭಾಷಣ ಮಾಡುತ್ತಾ, ಇಂದು ಜಮೀನಿನ ಉಳುಮೆಗೆ ದನಗಳನ್ನು ಕಟ್ಟಿ ಬೇಸಾಯ ಮಾಡುವುದು ಕಡಮೆಯಾಗಿದೆ; ಅದು ಹಾಗಾಗದೆ ಬೇಸಾಯಕ್ಕೆ ಹೆಚ್ಚಾಗಿ ದನಗಳನ್ನು ಉಪಯೋಗಿಸಿಕೊಳ್ಳುವುದು ಒಳ್ಳೆಯದೆಂದು ತಿಳಿಸಿದರು; ರೈತರು ಒಳ್ಳೆಯ ತಳಿ ರಾಸುಗಳನ್ನು ಬೆಳೆಸಬೇಕೆಂದು ತಿಳಿಸಿದರು.

★

ಎಮ್ಮೆ ಮೇವಣಿಗೆ

ಮೈಸೂರು— ಮೈಸೂರು ಜಿಲ್ಲಾ ಕೇಂದ್ರ ಚಲನಚಿತ್ರ ಸಮಿತಿ ಆಶ್ರಯದಲ್ಲಿ ನಾಳೆ ನಗರದ ಮುಖ್ಯ ಬೀದಿಗಳಲ್ಲಿ ಎಮ್ಮೆಗಳ ಮೇವಣಿಗೆ ಮತ್ತು ಬ್ರಹ್ಮಚಾರಿ ಭೂತದ ದಹನ ಏರ್ಪಡಿಸಲಾಗಿದೆ.

ಗಡಿ ಬಗ್ಗೆ ಪ್ರಧಾನಿಯವರಲ್ಲಿ ಮನವಿ

ಪೂನಾ— ಪಟಾಸ್ಕರ್ ಸೂತ್ರದಂತೆ ಮಹಾರಾಷ್ಟ್ರ-ಕರ್ನಾಟಕ ಗಡಿಯನ್ನು ಶೀಘ್ರದಲ್ಲೇ ವ್ಯವಸ್ಥೆ ಮಾಡುವಂತೆ ರಕ್ತದಲ್ಲಿ ರುಜುಮಾಡಿದ್ದ ಮನವಿಪತ್ರವನ್ನು ಪ್ರಧಾನಿ ಇಂದಿರಾರವರಿಗೆ ರಾಜಭವನದಲ್ಲಿ ಶನಿವಾರ ಅರ್ಪಿಸಲಾಯಿತು.

○

ಖಾಲಿ ಸೀಮೆಎಣ್ಣೆ ಡಬ್ಬಗಳ ಮೆರವಣಿಗೆ

ಮೈಸೂರು— ಸೀಮೆಎಣ್ಣೆ ಇತ್ಯಾದಿ ಅವಶ್ಯ ಪದಾರ್ಥಗಳ ಅಭಾವವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲು ಕನ್ನಡ ಚಳವಳಿಗಾರರ ಕೇಂದ್ರ ಸಮಿತಿ ಆಶ್ರಯದಲ್ಲಿ ನಾಳೆ ಪುರಭವನದಿಂದ ಖಾಲಿ ಸೀಮೆಎಣ್ಣೆ ಡಬ್ಬಗಳ ಪ್ರದರ್ಶನ ನಡೆಸಲಾಗುವುದು.

★

ಉತ್ಕಟತೆಗೆ ಮುಖ್ಯ ಕಾರಣ

ಹೈದರಾಬಾದು— ಕೆಲವು ಜನರು ಸ್ವಯಂ ನಿರ್ಮಿತ ಮತ್ತು ರಾಜ್ಯಾಂಗಗಳನ್ನು ಸ್ವಪ್ರಯೋಜನಕ್ಕಾಗಿ ಮಾಡುತ್ತಿದ್ದು ಅದನ್ನು ಮುಂದುವರಿಸಿಕೊಳ್ಳುತ್ತಿರುವದು ವಿಶ್ವವ್ಯಾಪಿ ಉತ್ಕಟತೆಗೆ ಮುಖ್ಯ ಕಾರಣವಾಗಿದೆಯೆಂದು ಮಹಾರಾಷ್ಟ್ರ ಎಂಎಲ್‌ಎ ಜಯಾ ಉಲಾಲ್ ಬಖರಿಯವರು ಹಜರತ್ ಪೈಗಂಬರ್‌ರವರ ಜನ್ಮದಿನದ ಸಂಬಂಧದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಹೇಳಿದರು.

★

ಕ್ಯಾಬರೆ ನೃತ್ಯ ಪ್ರತಿಬಂಧಕ

ಕೊಚ್ಚಿ— ಸರಕಾರದ ಆಜ್ಞೆಯಂತೆ ಮೂರು ಸುಖಭೋಗ ಹೋಟಲುಗಳಲ್ಲಿ ಕ್ಯಾಬರೆ ಪ್ರದರ್ಶನ ಪ್ರತಿಬಂಧಿಸಲಾಗಿದೆ; ಕಳೆದವಾರ ಮುನಿಸಿಪಲ್ ಕಾರ್ಪೊರೇಷನ್, ನಿರ್ಣಯ ಮೂಲಕ, ಸರಕಾರವನ್ನು ಕ್ಯಾಬರೆ ನೃತ್ಯ ಮತ್ತು ಬೆತ್ತಲೆ ಚಿತ್ರ ಮತ್ತು ಭಿತ್ತಿಪತ್ರ ಪ್ರದರ್ಶನವನ್ನು ಪ್ರತಿಬಂಧಿಸಲು ಒತ್ತಾಯ ಮಾಡಿತ್ತು.

ಅನಾದರ

ವಿಜಯವಾಡ— ತೀವ್ರ ವಾದ ಪಕ್ಷ ಮತ್ತು ತೀವ್ರ ಬಲಪಕ್ಷಗಳು, ತಮ್ಮ ಸರಕಾರವನ್ನು ಉರುಳಿಸಿ, ಉತ್ಪಾದನೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನೂ ಅತಂಕ ಪಡಿಸಿ, ದೇಶದ ಸಂಪತ್ತನ್ನು ನಷ್ಟಪಡಿಸಲು ಮತ್ತು ಹಾಳುಮಾಡಲು ಪಿತೂರಿ ನಡೆಸುತ್ತಿವೆಯೆಂದೂ, ಜನತೆ ಎಚ್ಚರಿಕೆಯಿಂದಿರಬೇಕೆಂದೂ ಪ್ರಧಾನಿ ಇಂದಿರಾರವರು ಭಾರಿ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

★

ಇದೊಂದು ರೀತಿ ಸಲಹೆ

ಬೆಂಗಳೂರು— ಆಡಳಿತ ಪಕ್ಷದ ಸದಸ್ಯರು ಮಾತ್ರ ವಿಭಾಗ ಮತ್ತು ಜಿಲ್ಲಾಧಿಕಾರಿಗಳಾಗಿ ನೇಮಿಸಲ್ಪಬೇಕೆಂಬ ಸಲಹೆಯನ್ನು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಪೆರುಮಾಳ್‌ರವರು ತಿಳಿಸಿದರು; ಇದರಿಂದ ಪಾರ್ಟಿ ಪ್ರೋಗ್ರಾಂ ಪ್ರಭಾವಿತವಾಗಿ ಜಾರಿಯಾಗುವುದೆಂದರು.

★

ದರ ಹೆಚ್ಚಿಕೆ

ಬೆಂಗಳೂರು — ಆಟೋರಿಕ್ಷಾ ಮತ್ತು ಟ್ಯಾಕ್ಸಿಗಳ ಹೆಚ್ಚಿಸಿರುವದು ಮುಂದಿನ ತಿಂಗಳ ಕಡೆಯೊಳಗೆ ಜಾರಿಗೆ ಬರುವುದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ಪಟ್ನಾ— ಇಂದು ಸರ್ವೋದಯನಾಯಕ ಶ್ರೀ ಜಯಪ್ರಕಾಶ ನಾರಾಯಣರವರ ನೇತೃತ್ವದಲ್ಲಿ ಪ್ರತಿಭಟನಾ ಮೌನ ಮೆರವಣಿಗೆ ಮತ್ತು ಪ್ರಾರ್ಥನಾ ಏರ್ಪಾಡಿತ್ತು.

ಮತ್ತೆ ಶ್ರೀ ಗಿರಿಯವರೇ ಅಧ್ಯಕ್ಷರು

ಉಜ್ಜಯಿನಿ— ಅಧ್ಯಕ್ಷ ಗಿರಿಯವರು ಅಧ್ಯಕ್ಷತೆಗೆ ಪುನಃ ಸ್ಪರ್ಧಿಸುವರೆಂದೂ, ಪ್ರಧಾನಿ ಇಂದಿರಾರವರು ಅವರಿಗೆ ಬೆಂಬಲ ನೀಡುವರೆಂದೂ, ತಮಗೆ ಖಚಿತವಾಗಿ ತಿಳಿದುಬಂದಿರುವುದೆಂದೂ ಜನಸಂಘ ನಾಯಕ ಶ್ರೀ ಎ. ಬಿ. ವಾಜಪೇಯಿ ಹೇಳಿದರು.

★

ಎಣ್ಣೆ ಆಮದು

ನವದೆಹಲಿ— ಈ ವರ್ಷ ಎಣ್ಣೆ ಆಮದು ರೂ 31300 ಕೋಟಿ ಆಗಬಹುದೆನ್ನಲಾಗಿದೆ.

★

ಅಪಾರ ಅಕ್ಕಿ ವಶ

ಹುಬ್ಬಳ್ಳಿ— ಹತ್ತಿ ಮಾರುಕಟ್ಟೆ ಭಾಗದಲ್ಲಿ ಒಬ್ಬ ಸಗಟು ವ್ಯಾಪಾರಿಯಿಂದ ತಾಸಿಲ್ದಾರರು 452 ಮೂಟೆ ಅಕ್ಕಿ ವಶಪಡಿಸಿಕೊಂಡರು.

★

ರಥೋತ್ಸವದಲ್ಲಿ

ಬಳ್ಳಾರಿ— ಹಂಪಿ ಜಾತ್ರೆಯಲ್ಲಿ ಎಳೆಯಲ್ಪಡುತ್ತಿದ್ದ ಎರಡು ರಥಗಳಲ್ಲಿ ಸಂಘರ್ಷಣೆಯಾಗಿ ಒಬ್ಬ ಸತ್ತು ಒಬ್ಬ ಗಾಯಗೊಂಡನು.

★

ಹಳೇ ಕಾಂಗ್ರೆಸ್ ನಿರ್ಧಾರ

ನವದೆಹಲಿ— ಇಂದಿರಾ ಕಾಂಗ್ರೆಸ್ಸಿನೊಡನೆ ಯಾವ ಸಂಬಂಧವನ್ನೂ ಇಟುಕೊಳ್ಳಕೂಡದೆಂದು ಹಳೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿತು.

●

ಜ್ಞಾನಪೀಠ ಪಾರಿತೋಷಕ

ಬೆಂಗಳೂರು— ಜ್ಞಾನಪೀಠ ಪಾರಿತೋಷಕ ರೂ 1 ಲಕ್ಷದಲ್ಲಿ ಪ್ರಖ್ಯಾತ ಕನ್ನಡ ಕವಿ ಶ್ರೀ ಬೇಂದ್ರೆಯವರಿಗೆ ರೂ. 50000 ಮತ್ತು ಒರಿಯಾ ಕವಿ ಶ್ರೀ ಗೋಪಿನಾಥ ಮೋಹನ್‌ರಿಗೆ ರೂ.50000 ದೊರೆಯಿತು.

ಕಪ್ಪೆ ರಕ್ಷಿಸಿ

ನವದೆಹಲಿ— ದೇಶದಲ್ಲಿ ಸಿಕ್ಕಾಪಟ್ಟೆ ಕಪ್ಪೆ ಹಿಡಿಯುತ್ತಿರುವ ಬಗ್ಗೆ ಲೋಕ ಸಭೆಯಲ್ಲಿ ಸದಸ್ಯರು ಕಳವಳ ವ್ಯಕ್ತಪಡಿಸಿದರು – ವಿದೇಶೀ ವಿನಿಮಯಕ್ಕಾಗಿ ಕಪ್ಪೆ ಗಳನ್ನು ಕೊಲ್ಲುತ್ತಿರುವುದು ತಪ್ಪೆಂದು ತಿಳಿಸಿದರು.

ಪಂಜಾಬಿಗೆ ಹಾಲು ಸೇವನಾ ಪ್ರಶಸ್ತಿ

ಭಾರತದಲ್ಲಿ ತಲಾ ಹಾಲು ಸೇವನೆಯ ರಾಜ್ಯಗಳಲ್ಲಿ ಪಂಜಾಬಿಗೆ ಪ್ರ ಥ ಮ ಸ್ಥಾ ನ ದೊರೆತಿದೆ – ಇಲ್ಲಿ ಪ್ರತಿದಿನ 50 ಲಕ್ಷ ಲೀಟರು ಹಾಲು ಉತ್ಪತ್ತಿಯಾಗುತ್ತ ದೆ – 23 ಲಕ್ಷ ಜಾನುವಾರುಗಳಿದ್ದು, ಅವೆಲ್ಲಾ ದೃಢಕಾಯವಾಗಿದ್ದು ಅ ತ್ಯಂ ತ ಹೆಚ್ಚಿನ ಪ್ರಮಾಣದಲ್ಲಿ ಹಾಲು ಒದಗಿಸುತ್ತವೆ ಎಂದು ವರದಿಯಾಗಿದೆ.

ಕಾಡುಕತ್ತೆಗಳ ಸಂರಕ್ಷಣೆ ಪ್ರಯತ್ನ

ನವದೆಹಲಿ— ಕಚ್ ಮರಳುಕಾಡಿನಲ್ಲಿ ಸುತ್ತಾಡುತ್ತಿರುವ ಮತ್ತು ಈಗ ಕ್ಷೀಣವಾಗುತ್ತಿರುವ ಜಾತಿಯ ಕಾಡುಕತ್ತೆಗಳಿಗೆ ಸೌಂಪ್ಯದಲ್ಲಿ ಒಂದು ಪ್ರಾಣಿ ಧಾಮ ಏರ್ಪಡಿಸಲಾಗುವುದೆಂದು ಗೌರ್ನರರ ಸಲಹೆಗಾರ ಶ್ರೀ ಸಾರಿಸ್ಟರವರು ಹೇಳಿ ದರು – ಈಗ ಇರುವ ಈ ಜಾತಿಯ 350 ಪ್ರಾಣಿಗಳ ಸಂರಕ್ಷಣೆ ಮಾಡಲಾಗುವದು – 25 ವರ್ಷಗಳ ಹಿಂದೆ ಈ ಪ್ರಾಣಿಗಳು 4000 ದಿಂದ 4500 ರವರೆಗೆ ಇದ್ದವು.

ದಿವ್ಯವಾಣಿ

ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸುವವರ ಶ್ರಮ ವ್ಯರ್ಥ. — ಲಾಟಿನ್ ಗಾದೆ

ವುಡ್‌ಲಾಂಡ್ 4 4 74 ರಿಂದ

ಅವೋಘ 2 ನೇ ವಾರ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ಅ ಪೆ ರಾ 4 4 74 ರಿಂದ

ನೈ ನ

ಅವೋಘ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಪಾತ್ರ – ಶಶಿಕಪೂರ್ ಮೌಸಮಿ ಚಟರ್ಜಿ ಸಂಗೀತ – ಶಂಕರ್ ಜೈಕಿಷನ್

ದಿನ 3 ಪ್ರದರ್ಶನಗಳು

ಭಾರತದಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— Humanitarian Propoganda Monthly...

Contribute Liberally

to the National Defence Fund

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore